

# ಮಕಾಡೆಯಾದ ಬಾಲಿವುಡ್ ಮಣೆಯಡಿಯ ಹೊಳಹುಗಳು...

ಬಾಲಿವುಡ್ ಮಕಾಡೆಯಾಗಿದೆ ಎಂದು ಒಂದೇ ವಾಕ್ಯದಲ್ಲಿ ವಿಮರ್ಶೆ ಮಾಡಿ ಮುಗಿಸಿದ ವರ್ಷ 2022. ಆದರೆ, ಅಲ್ಲಿಯೂ ಕೆಲವು ಗುರುತಿಸಬೇಕಾದ ಸಿನಿಮಾಗಳು ಅದೇ ವರ್ಷ ತೆರೆಕಂಡಿರುವುದನ್ನು ಅಲ್ಲಗಳೆಯಲಾಗದು.

'ಬೇಷರಮ್ ರಂಗ್' ಹಾಡೊಂದರಲ್ಲಿ ದೀಪಿಕಾ ಪಡುಕೋಣೆ ಕೇಸರಿ ಬಣ್ಣದ ಬಿಕಿನಿ ತೊಟ್ಟಿದ್ದನ್ನೇ ನೆಪವಾಗಿಸಿ ಇನ್ನೊಂದು 'ಬಾಯ್ಕಾಟ್ ಹ್ಯಾಷ್‌ಟ್ಯಾಗ್' ಅನ್ನು ತೇಲಿಬಿಡುತ್ತಿರುವ ಹೊತ್ತಿದು. ಈ ವಿದ್ಯಮಾನವನ್ನು ನಟಿ ರತ್ನಾ ಪಾಠಕ್ ಷಾ ಬೇರೊಂದು ರೂಪಕ ಹೇಳುತ್ತಾ ಉದಾಹರಿಸಿರುವುದು ಹೀಗೆ: 'ಹಸಿದವನು ಖಾಲಿ ತಟ್ಟೆಯ ಎದುರಲ್ಲಿ ಕುಳಿತು ದೇಶಕ್ಕೆ ಅವಮಾನ ಮಾಡಲಾಗುತ್ತಿದೆ ಎಂದು ಉದ್ಗರಿಸುವುದು ಥರವಲ್ಲ.'

'ಗಂಗೂಬಾಯಿ ಕಾಥಿಯಾವಾಡಿ' ಸಿನಿಮಾ ಮೂಲಕ ಸಂಜಯ್‌ಲೀಲಾ ಬನ್ಸಾಲಿ ಈ ವರ್ಷ ಬಾಲಿವುಡ್ ನೆನಪಿನಲ್ಲಿ ಇಟ್ಟುಕೊಳ್ಳಬಹುದಾದ ಸರಕನ್ನು ಕೊಟ್ಟರು. ಆಲಿಯಾ ಭಟ್ ಅಭಿನಯ ಹಾಗೂ ಅವರ ಪಾತ್ರಕ್ಕೆ ಅಗತ್ಯವಿರುವ ಪರಿವರ್ತನಾ ಶ್ರದ್ಧೆಗೆ ಕನ್ನಡಿ ಹಿಡಿದ ಸಿನಿಮಾ ಇದು. ತಮ್ಮದೇ ಮೆಲೋಡ್ರಾಮಾ ಹಾಗೂ ಅನುಕೂಲಸಿಂಧು ಹೆಣಿಗೆಯನ್ನು ಇಟ್ಟೂ ಸಂಜಯ್‌ಲೀಲಾ ಬನ್ಸಾಲಿ ಸಾರಾಸಗಟಾಗಿ ತಳ್ಳಿಹಾಕಬಾರದಾದಂಥ ಸಿನಿಮಾ ಕೊಟ್ಟರು.

'ಬ್ರಹ್ಮಾಸ್ತ್ರ ಭಾಗ–1' ಹೆಚ್ಚು ನಿರೀಕ್ಷೆ ಮೂಡಿಸಿದ್ದ ಅಯಾನ್ ಮುಖರ್ಜಿ ನಿರ್ದೇಶನದ ಸಿನಿಮಾ. ರಣಬೀರ್ ಕಪೂರ್ ಹಾಗೂ ಆಲಿಯಾ ಭಟ್ ಮದುವೆಯಾದ ವರ್ಷದಲ್ಲಿ, ಹೆಚ್ಚು ಹಣ ಖರ್ಚು ಮಾಡಿ ವಿಎಫ್‌ಎಕ್ಸ್ ಮಾಡಿಸಿದ ಹಾಗೂ ಸಹಜಪಾತ್ರಗಳಿಗೂ ಮಿಗಿಲಾದದ್ದನ್ನು ಉಳ್ಳ ಚಿತ್ರವೆಂಬ ಕಾರಣಕ್ಕೆ ಸದ್ದು ಮಾಡಿತ್ತು. 'ಕೇಸರಿಯಾ ತೇರಾ ಇಷ್ಕ್ ಹೈ ಪಿಯಾ' ಎಂಬ ಈ ಸಿನಿಮಾದ ಹಾಡು ದೊಡ್ಡ ಹಿಟ್ ಕೂಡ ಹೌದು. ಅರಿಜಿತ್ ಸಿಂಗ್ ಕಂಠದ ಆ ಹಾಡು ಈಗಲೂ ಗುನುಗುವವರು ಇದ್ದಾರೆ. ಸಿನಿಮಾ ಮಾತ್ರ ಬಾಲಿಶವಾದ ವಿಎಫ್‌ಎಕ್ಸ್‌ನಿಂದಾಗಿ ಟೀಕಾಪ್ರಹಾರ ಎದುರಿಸಿತು. ಆಲಿಯಾ ಪಾತ್ರ ಪೋಷಣೆ ಸರಿಯಾಗಿಲ್ಲವೆಂಬ ಅಭಿಪ್ರಾಯ ಕೂಡ ವ್ಯಕ್ತವಾಯಿತು.

ರಾಜೀವ್ ಕಪೂರ್, ವರುಣ್ ಬುದ್ಧದೇವ್ ಪ್ರಬುದ್ಧ ಅಭಿನಯದ 'ತುಲಸಿದಾಸ್ ಜೂನಿಯರ್' ಅಥ್ಲೆಟಿಕ್ಸ್ ಆಗಬಯಸುವ ಯುವಕರು ನೋಡಬೇಕಾದ ಸರಕನ್ನು ಉಳ್ಳ ಸಿನಿಮಾ. ಸಂಜಯ್ ದತ್ ಕೂಡ ಇದರಲ್ಲಿ ಮುಖ್ಯ ಪಾತ್ರವೊಂದರಲ್ಲಿ ಅಭಿನಯಿಸಿದ್ದಾರೆ.

ಕ್ರೋಧ–ಮುಯ್ಯಿಯ ಮುಳ್ಳಿನ ಮೇಲೆ ನಿಂತ ಹೆಣ್ಣೊಬ್ಬಳು. ಪಾಪಪ್ರಜ್ಞೆಯಿಂದ ತನ್ನ ಪ್ರತಿಬಿಂಬವನ್ನು ತಾನೇ ವಿಶ್ಲೇಷಿಸಿಕೊಳ್ಳುವ ಹಿರೀಕಳಿನ್ನೊಬ್ಬಳು. ಸುರೇಶ್ ತ್ರಿವೇಣಿ ನಿರ್ದೇಶನದ 'ಜಲ್ಸಾ' ತಿರುಗಾಣಿಯಲ್ಲಿ ಕುಳಿತ ಪಯಣದಂತೆ ಆಗೀಗ ಉಸಿರುಗಟ್ಟಿಸುತ್ತಾ, ಭಾವುಕ ಪ್ರತಿಕ್ರಿಯೆಗಳನ್ನು ಸ್ಫುರಿಸುತ್ತ ಸಾಗುವ ಹೆಣಿಗೆ ಇರುವ ಮುಖ್ಯ ಸಿನಿಮಾ.

ಅಜಯ್ ದೇವಗನ್ ಹೊಸಕಾಲದ ಯಮರಾಜನಾಗಿ 'ಕೌನ್ ಬನೇಗಾ ಕರೋಡ್‌ಪತಿ' ಶೈಲಿಯಲ್ಲಿ ಸ್ವಾರ್ಥಿ ಮಿಲೇನಿಯಲ್ ಒಬ್ಬನನ್ನು ಸಂದರ್ಶಿಸುವ ಕಥಾನಕದ ಸಿನಿಮಾ 'ಥ್ಯಾಂಕ್ ಗಾಡ್'. ವರುಣ್ ಧವನ್ ಕೂಡ ಅಭಿನಯಿಸಿದ ಈ ಸಿನಿಮಾ ಸಣ್ಣ ಸುಳ್ಳೊಂದು ಹೇಗೆ ಬದುಕಿಗೆ ಅನಿರೀಕ್ಷಿತವೂ, ಅಪಾಯಕಾರಿಯೂ ಆದ ತಿರುವುಗಳನ್ನು ಒಡ್ಡಬಲ್ಲದೆನ್ನುವುದನ್ನು ಹೇಳಿತ್ತು.

ಅಸ್ಸಾಂ, ಮೇಘಾಲಯ, ಮಣಿಪುರ, ಮಿಜೋರಾಮ್, ನಾಗಾಲ್ಯಾಂಡ್ ಹಾಗೂ ತ್ರಿಪುರ ಈ ರಾಜ್ಯಗಳನ್ನು ಪಶ್ಚಿಮ ಬಂಗಾಳವೆಂಬ ದೊಡ್ಡಣ್ಣನ ಪುಟ್ಟ ತಂಗಿಯರೆಂದೇ ಬಣ್ಣಿಸುವ ಪರಿಪಾಠವಿದೆ. ಅಲ್ಲಿನ ಉತ್ಪನ್ನಗಳನ್ನು ದೇಶದ ಇತರೆ ಭಾಗಗಳಿಗೆ ವಿತರಣೆ ಮಾಡಲಾಗದಂತಹ ಸ್ಥಿತಿ ಇದೆ. ಸರಾಸರಿ ಭಾರತೀಯನೊಬ್ಬ ತನ್ನ ನಾಡಿನ ಅಸ್ಮಿತೆಯೊಂದಿಗೆ ಗುರುತಿಸಿಕೊಳ್ಳಲೂ ಹೆಣಗಾಡಬೇಕಾದ ಸಂಕೀರ್ಣ ವಿಷಯವನ್ನು ಇಟ್ಟುಕೊಂಡ ಸಿನಿಮಾ 'ಅನೇಕ್'. ಬಹುತ್ವದ ಬಿಳಲುಗಳನ್ನು ಹಿಡಿದು ಜೀಕುವ ಸ್ವಭಾವದ ಅನುಭವ್ ಸಿನ್ಹ ನಿರ್ದೇಶನದ ಸಿನಿಮಾ ಇದು. ಆಯುಷ್ಮಾನ್ ಖುರಾನಾ ಅಭಿನಯವಿರುವ ಈ ಚಲನಚಿತ್ರ ಸಂಕೀರ್ಣ ಹೆಣಿಗೆಯಿಂದಾಗಿಯೇ ಸಲೀಸಾಗಿ ನೋಡಿಸಿಕೊಳ್ಳಲಿಲ್ಲ.

ರೊಮ್ಯಾಂಟಿಕ್ ಫ್ಯಾಮಿಲಿ ಡ್ರಾಮಾ 'ಜುಗ್ ಜುಗ್ ಜಿಯೊ', ಆಲಿಯಾ ಭಟ್ ಸಹ ನಿರ್ಮಾಣದ ಮೊದಲ ಸಿನಿಮಾ ಎನಿಸಿಕೊಂಡ 'ಡಾರ್ಲಿಂಗ್ಸ್', ಸಣ್ಣ ಪಟ್ಟಣದ ಕ್ರೀಡಾ ಡ್ರಾಮದ ಸಿನಿಮಾ 'ಜಾದೂಗರ್', ಅಮೀರ್ ಖಾನ್ ಮಹತ್ವಾಕಾಂಕ್ಷೆಯ ಹಾಗೂ ಬಾಯ್ಕಾಟ್ ಅಭಿಯಾನದಿಂದಾಗಿ ದೊಡ್ಡ ಪೆಟ್ಟು ತಿಂದ 'ಲಾಲ್ ಸಿಂಗ್ ಛಡ್ಡಾ' ಕೂಡ 2022ರ ನೋಡಬಲ್ ಸಿನಿಮಾಗಳು.

■ ಎನ್ವಿ